**ದಿನಾಂಕಃ 05.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಿಂದಃ**

1. ವಾದಿಯು ಜಮೀನು ಅವರಿಗೆ ಬೇಕೆಂದು ಹೇಳಿ ದಾವೆ ಹಾಕಿರುತ್ತಾರೆ. ಸರ್ವೆ ನಂ.30/1 ಕ್ಕೆ ದಾವೆ ಹಾಕಿರುತ್ತಾರೆ. ಸರ್ವೆ ನಂ.30/1 ರಲ್ಲಿ 29 ಗುಂಟೆ ವಿಸ್ತೀರ್ಣಕ್ಕೆ ದಾವೆ ಹಾಕಿರುತ್ತಾರೆ. ಸದರಿ ಸ್ವತ್ತಿನ ಪೂರ್ವಕ್ಕೆ ಬಸವಯ್ಯ, ಪಶ್ಚಿಮಕ್ಕೆ ತಿಮ್ಮೇಗೌಡ, ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಚೂಡಿಸಿದ್ದಯ್ಯ ಇರುತ್ತಾರೆ. ವಾದಿಗೆ ಮೂಲತಃ ಸ್ವತ್ತು ಬೈರೇಗೌಡರಿಂದ ಬಂದಿರುತ್ತದೆ. ಅದು ಪಿತ್ರಾರ್ಜಿತ ಸ್ವತ್ತಾಗಿದ್ದು ಬೈರೇಗೌಡ ಹಾಗೂ ಬಸವಯ್ಯ ಇಬ್ಬರು ಅಣ್ಣ ತಮ್ಮಂದಿರು ಆಗಿದ್ದು ಅವರು ಸದರಿ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದರು. ವಿಭಾಗದಲ್ಲಿ ವಾದಿಗೆ ಬಂದಿರುತ್ತದೆ. ವಿಭಾಗ ಪತ್ರವನ್ನು ನಾನು ನೋಡಿರುವುದಿಲ್ಲ. ವಿಭಾಗ ಎಷ್ಟನೇ ಇಸವಿಯಲ್ಲಿ ಆಗಿರುತ್ತದೆಂದು ಗೊತ್ತಿರುವುದಿಲ್ಲ.

2. ವಿಭಾಗದಲ್ಲಿ ವಾದಿಯ ಕುಟುಂಬ ಯಾವ ರೀತಿಯಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಹಿಸ್ಸೆ ಎಂದು ವಿಭಾಗ ಮಾಡಿಕೊಂಡಿರುತ್ತಾರೆಂದು ನನಗೆ ಹೇಳಲಾಗುವುದಿಲ್ಲ. ದಾವಾ ಸ್ವತ್ತಿನ ಪಹಣಿ ಪ್ರತಿವಾದಿ 1 ಹಾಗೂ ಅವರ ಗಂಡನ ಹೆಸರಿನಲ್ಲಿದೆ. ಮೂಲತಃ ದಾವಾ ಸ್ವತ್ತಿನ ಖಾತೆ 1ನೇ ಪ್ರತಿವಾದಿಯ ಮಾವನವರಾದ ಸಿದ್ದೇಗೌಡರ ಹೆಸರಿನಲ್ಲಿತ್ತು ಎಂದರೆ ಸರಿ. ಪ್ರಸ್ತುತ ದಾವೆ 29 ವರೆ ಗುಂಟೆ ವಿಸ್ತೀರ್ಣಕ್ಕೆ ನಡೆಯುತ್ತಿದೆ ಎಂದರೆ ಸರಿ. 1ನೇ ಪ್ರತಿವಾದಿಯ ಮಾವ ತೀರಿಕೊಂಡ ನಂತರ ಅವರ ಗಂಡನ ಹೆಸರಿನಲ್ಲಿ ಖಾತೆ ಬಂದಿರುತ್ತದೆಂದರೆ ಸರಿ. ಈಗ 1ನೇ ಪ್ರತಿವಾದಿಯ ಗಂಡ ಕೂಡ ತೀರಿಕೊಂಡಿರುತ್ತಾರೆಂದರೆ ಸರಿ. ಹಾಗಾಗಿ 1ನೇ ಪ್ರತಿವಾದಿಯ ಹೆಸರಿನಲ್ಲಿ ಪೌತಿ ಖಾತೆ ಇದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಈಗಲೂ ಸಹಿತ ಪ್ರತಿವಾದಿಗಳೇ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ ವಾದಿ ಇರುತ್ತಾರೆಂದು ನುಡಿಯುತ್ತಾರೆ.

3. ದಾವಾ ಸ್ವತ್ತಿನ ಅಕ್ಕಪಕ್ಕದಲ್ಲಿ ನನ್ನ ಜಮೀನು ಇರುತ್ತದೆ. ಸರ್ವೆ ನಂ.80 ನನಗೆ ಸೇರಿರುತ್ತದೆ. ನನ್ನ ಜಮೀನು ದಾವಾ ಸ್ವತ್ತಿನ ಪಕ್ಕದಲ್ಲಿ ಇರುವುದಾಗಿ ತೋರಿಸಲು ನಾನು ಪಹಣಿಯನ್ನು ಹಾಜರು ಪಡಿಸಿರುವುದಿಲ್ಲ. ವಾದಿಯೇ ನನ್ನನ್ನು ಅವರ ಪರ ಸಾಕ್ಷಿ

ನುಡಿಯಲು ಕರೆದುಕೊಂಡು ಬಂದಿರುತ್ತಾರೆಂದರೆ ಸರಿ. ಪ್ರಮಾಣ ಪತ್ರವನ್ನು ಅವರೇ ವಕೀಲರ ಮೂಖಾಂತರ ತಯಾರು ಮಾಡಿ ಹಾಕಿಸಿರುತ್ತಾರೆಂದರೆ ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿದ್ದರೂ ಸಹಿತ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಪ್ರಧಾನ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**